Doc-249
T-P-2

K ೦೦ KRNN 12

25-2-74

ರಾಜ್ಯದಲ್ಲಿ ಪ್ರಥಮ ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

First Golden Jubilee Celebrated Paper in The State

** Now in 57 th Year **

'Satyavadi daily, Mysore 4



ಧಣಿಗಳು ಆರಮನೆ ಒಡೆಯರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಪರಮಪೂಜ್ಯ ಜಗದ್ಗುರು ಎಂ. ಎಸ್. ಕೃಷ್ಣರಾವ್ [3 ಪೈಸೆ

ಕಡಲೇಕಾಯಿ ಅಕ್ಕನ ದಾಸ್ತಾನು ಪತ್ತೆ

ನಿಜವಾದ ಭಕ್ತ ಯಾರು?

●

ಅತ್ಯಂತ ವಿಷ್ಣುಭಕ್ತನಾದ ನಾರದನು ಸದಾ ಶ್ರೀ ಹರಿಯ ನಾಮೋಚ್ಚರಣೆ ಮಾಡುತ್ತಿರುವುದರಿಂದ ತಾನು ಅತ್ಯಂತ ದೊಡ್ಡ ಭಕ್ತನೆಂಬ ಊಹೆಯಿಂದ ತವರಿಸ್ಪಟ್ಟಿದ್ದನು. ಎಲ್ಲವನ್ನೂ ಬಲ್ಲ ಭಗವಂತನಿಗೆ ಇದು ಗೊತ್ತಿತ್ತು. ತನ್ನ ಭಕ್ತ ನಾರದನಿಗೆ ಒಂದು ಪಠವಿಲಿಸಬೇಕೆಂಬ ಇಚ್ಛೆಯಿಂದ, ನಾರದನು ತನ್ನ ಹತ್ತಿರ ಬಂದಾಗ, ಭಗವಂತನು ತುಂಬಾ ನರಳುತ್ತಿರುವಂತೆ ನಟಿಸಿದನು. ಯಾತಕ್ಕಾಗಿ ಪರಳುತ್ತಿರುವುದೆಂದು ನಾರದನು ಭಗವಂತನನ್ನು ಕೇಳಿದನು. ಭಗವಂತನು ಚಿಂತೆ ಮತ್ತು ನ್ಯಸನಪೂರಿತ ಧ್ವನಿಯಿಂದ " ಓ ನಾರದನೇ, ನನಗೆ ತುಂಬಾ ಅಸ್ವಸ್ಥತೆಯಾಗಿದೆ; ತಲೆ ವಿಪರೀತ ನೋವುತ್ತಿದೆ " ಎಂದು ಹೇಳಿದಾಗ, ನಾರದನು ಅದಕ್ಕೇ ಏನು ಔಷಧಿ ದಯವಿಸಾಡಿ ತಿಳಿಸಿ ಎಂದು ಕೇಳಿದನು. ಅದಕ್ಕೆ ಔಷಧವಿದೆ, ಆದರೆ ಪಡೆಯುವುದು ಕಷ್ಟ ಎಂದು ಭಗವಂತನು ಹೇಳಿದಾಗ, ನಾರದನು ಆತುರದಿಂದ, ದಯವಿಟ್ಟು ತಿಳಿಸಿ, ನಾನು ಅವನ್ನು ತರಲೇ ಬೇಕು, ಎಂದು ಹೇಳಿದನು.

ಆಗ ಭಗವಂತನು, ಓ ನಾರದರೇ, ನನ್ನ ಯಾವುದಾದರೂ ಭಕ್ತರ, ಅವನ ಅಥವಾ ಅವಳ ಪಾದಧೂಳನ್ನು ನನ್ನ ತಲೆಗೆ ಹಚ್ಚಿದರೆ ನಾನು ಕೂಡಲೇ ಗುಣಗೊಳ್ಳುವೆನೆಂದು ಹೇಳಿದಾಗ, ತಾನು ಭಕ್ತರಲ್ಲೆಲ್ಲಾ ಭಕ್ತನೆಂದು ತಿಳಿದಿದ್ದ ನಾರದನುದಿಗ್ಭ್ರಮೆಗೊಂಡು " ಯಾವ ಭಕ್ತನು ದೇವರ ತಲೆಯ ತನ್ನ ಪಾದಧೂಳನ್ನು ಹಚ್ಚಲು ಸಾಕಷ್ಟರಬ್ಬನು ; ಅದನ್ನು ಯೋಚಿಸುವುದೂ ಪೈವನಿಂದೆ ; ಪಾಪಕರ " ಎಂದೆಂದು ಕೊಂಡನು. ಆದರೆ ನರಳುತ್ತಿರುವ ತನ್ನ ಯಜಮಾನನು ಗುಣಗೊಳ್ಳಲೇಬೇಕೆಂದು ಕೊಂಡು, ನೂರಾರು ಶ್ಲೋಕಗಳನ್ನೆಲ್ಲಾ ಸ್ತುತಿಸಿದನು. ಅವನು ಸಮಾಪಿಸಿದ ಭಕ್ತರೆಲ್ಲ ಈ ದೈವನಿಂದನೆ ಮತ್ತು ಪಾಪಕರ ಯೋಜನೆಗೆ ಸಹಮತಿಸಿದರು. ಕಟ್ಟಕಡೆಗೆ ನಾರದ ಗೋಪ ಮತ್ತು ಗೋಪಿಗಳ ಸ್ಥಳವಾದ ವೃಂದಾವನಕ್ಕೆ ಬಂದನು. ಅವರು ನಾರದನಿಗೆ ಹೃತ್ಪೂರ್ವಕವಾಗಿ ಸ್ವಾಗತಿಸಿ, ಭಗವಂತನ ಆರೋಗ್ಯವನ್ನು ವಿಚಾರಿಸಿದರು. ನಾರದನು, ಸ್ವಾಮಿಯ ಖಾಯಿಲೆ, ಅದು ಹಾಸಿಹೂಗಲು ಸ್ವಾಮಿಯೇ ಹೇಳಿದ ಔಷಧವನ್ನು ತಿಳಿಸಿದಾಗ, ಗೋಪಿಗಳಲ್ಲಿ ಕೋಲಾಹಲ ಉಂಟಾಗಿ ಗಾಬರಿಗೊಂಡು ಗೋಳಾಟ ಪ್ರಾರಂಭಿಸಿತು. ನಂತರ ಅವರಲ್ಲಿ ಸ್ವಧೈರ್ಯತಿ ಕಚ್ಚಾಟ ಉಂಟಾಗಿ, ಪ್ರತಿಯೊಬ್ಬರೂ " ಓ ನಾರದರೇ, ಸ್ವಾಮಿಯ ತಲೆಗೆ ಹಚ್ಚಲು ಇಲ್ಲಿ ನನ್ನ ಕಾಲು ಧೂಳಿನ ಕಣಗಳಿವೆ ; ತೆಗೆದುಕೊಂಡುಹೋಗಿ ಸ್ವಾಮಿಯ ಇಚ್ಛೆಯಂತೆ ಹಚ್ಚಿ ; ತಕ್ಷಣ ಹೋಗಿ; ತಡಮಾಡಬೇಡಿ, ಸ್ವಾಮಿಗೆ ಎಷ್ಟು ಯಾತನೆಯಾಗಿದೆಯೋ; ಸಹಿಸಲು ಸಾಧ್ಯವಿಲ್ಲ ; ನೀವು ಕೂಡಲೇ ಹೋಗಿ ; ಇನ್ನೂ ಹೆಚ್ಚಾಗಿ ಬೇಕಾದರೆ ತಿಳಿಸಿ" ಎಂದು ಹೇಳಿದರು.

ಈ ಸಾರಿ ನಾರದರು ಮತ್ತು ಬೆಪ್ಪಾಗಿ ಅಲ್ಲಿ ಶೇಖರಿಸಲಾದ ಧೂಳಿನ ಅಣುಗಣ್ಣನ್ನು ತೆಗೆದುಕೊಂಡು ವೈಕುಂಠಕ್ಕೆ ಹೋಗಿ ಭಗವಂತನ ತಲೆಗೆ ಹಚ್ಚಿದನು. ತಕ್ಷಣ ಗುಣಗೊಂಡ ಸ್ವಾಮಿಯು ನಾರದರಿಗೆ " ಓ ನಾರದರೇ, ಗೋಪಿಗಳು ನನ್ನ ಪರಮ ಭಕ್ತರು ; ನಾನು, ನನ್ನ ವಿಷಯ, ನನ್ನನ್ನು ಮಾತ್ರ, ಅವರು ಚಿಂತಿಸುತ್ತಿರುವರು, ಜೀವಿಸುತ್ತಿರುವರು. ನನಗಾಗುವ ಅತ್ಯಲ್ಪ ಕಸಿಷ್ಟ ಯಾತನೆಯನ್ನೂ ವ್ಯಸನವನ್ನೂ ಅವರು ಸಹಿಸಲಾರರು ; ಜೀವಿಗಳ ನಿವಾರಣೆಗಾಗಿ ಏನನ್ನು ಬೇಕಾದರೂ ತ್ಯಾಗಮಾಡಿಸುವರು, ಧೂಳುಧೂಳಿನ ಮಾತೇನು, ಒಬ್ಬ ಮನುಷ್ಯ ಅಥವಾ ಮಹಿಳೆಗೆ ಆಪತ್ತು ಬಂದಾಗ ಅವರು ತಮ್ಮ ಪ್ರಾಣವನ್ನೂ ಲೆಕ್ಕಿಸದೆ ಅವರ ಸಹಾಯಕ್ಕೆ ಧಾವಿಸುವರು. ಗೌರವ, ಜೀವ ಎಲ್ಲವನ್ನೂ ಅರ್ಪಿಸುವರು ; ಅವರು ತಮ್ಮ ವಿಷಯ ತಮ್ಮ ವಿಷಯ ಯೋಚಿಸುವುದಿಲ್ಲ ; ನಾನು ಸದಾ ನನಗಾಗಿಯೇ ಇರುವೆನೆಂದು ಅವರು ; ಆದುದರಿಂದ ಅವರು ಸಂಪೂರ್ಣ ಶರಣಾಗತರಾಗಿದ್ದಾರೆ.

ಎಣ್ಣೆ ರಾಷ್ಟ್ರಗಳಿಗೆ ಅದೃಷ್ಟ ಅಡಾಯ

ನ್ಯೂಯಾರ್ಕ್— 11 ಹಿರಿಯ ಎಣ್ಣೆ ರಫ್ತು ಮಾಡುವ ದೇಶಗಳು ಈ ವರ್ಷ 1 ಲಕ್ಷ ಡಾಲರು (ಸುಮಾರು 75000 ಕೋಟಿ) ನಷ್ಟ ಪಡೆಯುವ ನಿರೀಕ್ಷೆ ಇದೆ — 1980 ರ ಹೊತ್ತಿಗೆ ಅವರ ವಾರ್ಷಿಕ ಆದಾಯ 15000 ಡಾಲರು ಹೆಚ್ಚುವುದೆನ್ನಲಾಗಿದೆ

●

ತಾಮ್ರ ಕೇಂದ್ರೀಕರಣ

ಬೆಂಗಳೂರು— ರಾಜ್ಯ ಸರಕಾರವು ರೂ. 7.5 ಕೋಟಿ ಖರ್ಚಿನಲ್ಲಿ ಗುಲ್ಬರ್ಗದ ತಿಂತಿನಿಯಲ್ಲೂ, ಹಾಸನದ ಕಲ್ಯಾಣಿಯಲ್ಲೂ ತಾಂಬ್ರ ಕೇಂದ್ರೀಕರಣದ ಫ್ಯಾಕ್ಟರಿಗಳನ್ನು ಸ್ಥಾಪಿಸಲು ನಿರ್ಧರಿಸಿದೆ.

ಬೆಂಕಿ ನಿರೋಧಿಸುವ ಬಟ್ಟೆ

ಬೊಂಬಾಯಿ— ಸೆಂಚುರಿ ಗಿರಣಿಯು ವರು " ಅಗ್ನಿ ನಿರೋಧಕ ಸೀರೆ " ಎಂಬ ಬೆಂಕಿ ಅಪಾಯುಕ್ತವಾಗಿರದ ಸೀರೆ ತಯಾರಿಸಿದ್ದಾರೆ.

ಕನ್ನಡ ಮಾಧ್ಯಮಕ್ಕೆ ಪ್ರೋತ್ಸಾಹ

ಬೆಂಗಳೂರು— ಮುಂದೆ ಸರಕಾರಿ ಕೆಲಸಕ್ಕೆ ತೆಗೆದುಕೊಳ್ಳಲಾಗುವಾಗ ಕನ್ನಡ ಮಾಧ್ಯಮ ಉಮೇದುವಾರರ ಬಗ್ಗೆ ಹೆಚ್ಚು ಗಮನ ಕೊಡುವ ವಿಷಯ ಸರಕಾರದ ಪರ್ಯಾಲೋಚನೆಯಲ್ಲಿದೆಯೆನ್ನಲಾಗಿದೆ.

○

ಎರಡು ದಿನ ಬ್ರೆಡ್ ಇರಲಿಲ್ಲ

ಹುಬ್ಬಳ್ಳಿ—ಧಾರವಾಡ ಮತ್ತು ಈ ಜಿಲ್ಲೆಯ ಇತರ ಪಟ್ಟಣಗಳಲ್ಲಿ, ಮೈದಾ ಹಿಟ್ಟಿನ ಸರಬರಾಜು ಸಾಕಷ್ಟಿಲ್ಲವೆಂದು ಪ್ರತಿಭಟಿಸಿ, ರೊಟ್ಟಿ ಅಂಗಡಿ ಮಾಲೀಕರ ಸಂಘ ಕೊಟ್ಟಿದ್ದ ಕರೆಯಂತೆ ಸೋಮವಾರ ಮತ್ತು ಶನಿವಾರ ಎಲ್ಲಾ 300 ರೊಟ್ಟಿ ಅಂಗಡಿಗಳು ಬಂದಾಗಿದ್ದವು

★

ಅದೆಷ್ಟು ಅಕ್ಕನ ದಾಸ್ತಾನು

ಜುನಘೆಡ— ನಾಗರೀಕ ಪೂರೈಕೆ ಅಧಿಕಾರಿಗಳು ಕಳೆದವಾರ ಜಿಲ್ಲೆಯ 76 ಅಂಗಡಿಗಳಲ್ಲಿದ್ದ ಅಕ್ರಮ ದಾಸ್ತಾನುಗಳಾ 4800000 ಕೆಜಿ ನೆಲಗಡಲೆ ಕಾಯಿ 12264 ಟಿನ್ ಕಡಲೇಕಾಯಿ ಎಣ್ಣೆ, 3200 ಕೆಜಿ ಖಂಡಸಾರಿ ಸಕ್ಕರೆ, 800 ಬ್ಯಾರಲ್ ಕಚ್ಚಾ ಎಣ್ಣೆ, 155 ಜಿ ಎ ಸೀಮೆಂಟು, 1840 ಕ್ವಿಂಟಾಲು ಗೋಧಿಯನ್ನು ವಶಪಡಿಸಿಕೊಂಡರು.

★

ಫರ್ಜಣೆ

ಬೊಂಬಾಯಿ— ಉತ್ತರ ಬೊಂಬಾಯಿನಲ್ಲಿ ಹೊಸ ಬೌದ್ಧರಿಗೂ ಸವರ್ಣಹಿಂದೂಗಳಿಗೂ ಅದ ಘರ್ಷಣೆಯಲ್ಲಿ 3000 ಜನರ ಗುಂಪನ್ನು ಚದುರಿಸಲು ಪೋಲೀಸರು ಗುಂಡು ಹಾರಿಸಿದರು ; ಇಬ್ಬರು ತೀವ್ರ ಗಾಯಗೊಂಡರು.

ಪ್ರವಾಸೋದ್ಯಮ ಕಾರ್ಪೊರೇಷನ್ ಕಾರ್ಯಕ್ರಮ

ಬೆಂಗಳೂರು— ನಗರದಲ್ಲಿರುವ ಅಶೋಕಾ ಹೋಟೆಲನ್ನು ವಿಸ್ತರಿಸಿ ಮೈಸೂರಿನಲ್ಲಿ ಲಲಿತ ಮಹಲ್ ಹೋಟೆಲನ್ನು ಈ ವರ್ಷ ತೆರೆಯುವುದು, ಭಾರತ ಪ್ರವಾಸಿ ಅಭಿವೃದ್ಧಿ ಕಾರ್ಪೊರೇಷನ್ನಿನ 74–75 ರ ಕಾರ್ಯಕ್ರಮದಲ್ಲಿ ಸೂಚಿಸಲಾಗಿದೆ.

★

ಹೈ ಕೋರ್ಟ್‌ನಲ್ಲಿ ಕ್ರಿಕೆಟ್ ಪಾರ್ಟಿ

ಕೆನ್ಸಿಂಗ್ಟನ್ (ಜಮೈಕಾ)– ಇಲ್ಲಿಯ ಹೈ ಕೋರ್ಟ್‌ನಲ್ಲಿ ಶನಿವಾರ ಜಡ್ಜರು ಸಬೀನಾ ಪಾರ್ಕ್‌ನಲ್ಲಿ ನಡೆಯುತ್ತಿದ್ದ ಇಂಗ್ಲೆಂಡ್ ಮತ್ತು ವೆಸ್ಟ್ ಇಂಡಿಸ್ ನಡುವೆ ನಡೆಯುತ್ತಿದ್ದ ಕ್ರಿಕೆಟ್ ಟೆಸ್ಟ್ ಪಂಥದ ವಿಷಯಗಳನ್ನೂ, ಆಟದಲ್ಲಿನ ಏಟುಗಳನ್ನೂ ನಿರ್ಣಯಿಸುತ್ತಿದ್ದರು – ಅವರ ಮುಂದೆ ವಿಚಾರಣೆಯಾಗುತ್ತಿದ್ದ ಬ್ಯಾಂಕ್ ಡಕಾಯಿತಿ ಮೊಕದ್ದಮೆ ನಿಲ್ಲಿಸಿ, ಜೂರಿ ಸದಸ್ಯರನ್ನು ಬಿಡುಗಡೆ ಮಾಡಿದರು. ಅಪರಾಧಿಯೂ ಸೇರಿ ಕೋರ್ಟ್‌ನಲ್ಲಿದ್ದವರೆಲ್ಲರೂ ಕುಳಿತುಕೊಂಡು ಕೇಳುತ್ತಿದ್ದರು.

★

ಅರ್ಥಶಾಸ್ತ್ರಜ್ಞರ ಮನವಿಪತ್ರ

ಬೊಂಬಾಯಿ— ಹಣದುಬ್ಬರದಿಂದಲೇ ಪ್ರಸ್ತುತ ಆರ್ಥಿಕ ದುಸ್ಥಿತಿ, ಬೆಲೆ ಏರಿಕೆ ಇತ್ಯಾದಿ ಆಗಿರುವ ಬಗ್ಗೆ ಹೇಶದ 130 ಅರ್ಥಶಾಸ್ತ್ರಜ್ಞರು ಪ್ರಧಾನಿಯವರಿಗೆ ಮನವಿಪತ್ರ ಅರ್ಪಿಸಿ ನಿವಾರಣೆಗೆ ಹಲವು ಸಲಹೆಗಳನ್ನು ಮಾಡಿದ್ದಾರೆ.

★

ಕಾನ್ವೊಕೇಷನ್ ಬಹಿಷ್ಕಾರ

ನವದೆಹಲಿ— ಶನಿವಾರ ವಿಶ್ವವಿದ್ಯಾನಿಲಯದ ಕಾನ್ವೊಕೇಷನ್ನನ್ನು ವಿದ್ಯಾರ್ಥಿ ಸಂಘ ಬಹಿಷ್ಕರಿಸಿತ್ತು.

ವುಡ್‌ಲಾಂಡ್ಸ್ 22 2 74 ರಿಂದ

ಅಮೋಘ 7 ನೇ ವಾರ

ಅಮಿಯಾಸ್‌ರವರ ಹಿಂದಿ ಕಲರ್ ಮಹೋನ್ನತ ಚಿತ್ರ

ಅ ಭಿ ಮಾ ನ್

ಪ್ರತಿ ದಿನ 3 ಪ್ರದರ್ಶನಗಳು

ಪಾತ್ರ – ಅಮಿತಾಬ್‌ಚರ್ ಜಯಬಾದುರಿ ಡೇವಿಡ್ ಖಿಂಜಿ

ಬೆಳಗಿನ ಪ್ರದರ್ಶನ 10 30 ನವರಾತ್ರಿ

ಅ ಪೆ ರಾ 20 2 74 ರಿಂದ

ನಾನೂ ಬಾಳಬೇಕು

ಪಾತ್ರ — ಉದಯಕುಮಾರ್ ಆರತಿ

ಕಥೆ – ನಿರ್ಮಾಪಕ ಗೋಪಿ ಸಂಗೀತ : ಆರ್. ರತ್ನ

ಚಿತ್ರಕಥೆ, ಸಾಹಿತ್ಯ, ನಿರ್ದೇಶನ – ಸತ್ಯನಾರಾಯಣ

ಏಳು ಪ್ರದರ್ಶನಗಳು

Contribute Liberally

to the National Defence Fund

S H A K T I

S U D H A

A Superb Tonic

Help The Gorakshana

— HumanitarianPropoganda Monthly —

Protect the Cow

All India Blind Welfare Week

21 st ebruary to 27 February 1974

Flag Day on 26 th February 1974

Donate generouly for the cause of the the Blind.

Sponsored by :

sri sri Bijoy Krishna Ash am Relief ociety [Regd]
Netaji Eye & General Hospital
P O. Ramachand apur Ashram, Dist Purulia (W. Bengal)

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamaraja puram Mysore